# ಸೆಳೆತಗಳು

■ ಅನು ಬೆಳ್ಳೆ



ಹೊರಗೆ ಬಿರುಸಾಗಿ ಸುರಿಯುತ್ತಿದ್ದ ಜಡಿ ಮಳೆಗೆ ಆಟೊದಿಂದ ಇಳಿದ ಹೇಮಾ ನೇರವಾಗಿ ಮನೆಯೊಳಗೆ ಪ್ರವೇಶಿಸಿ ಅರುಣನ ಎದುರು ನಿಂತು ಕಣ್ಣೀರ್ಗರೆದಳು. ಇದ್ದಕ್ಕಿದ್ದಂತೆ ಇವಳಿಗೇನಾಯಿತೆಂದು ಅರುಣ ಅವಳನ್ನು ಸಮಾಧಾನಿಸಲೂ ಆಗದೆ, ವಿಚಾರಿಸಲೂ ಆಗದೆ ಬೆಪ್ಪು ಹಿಡಿದಂತೆ ನಿಂತ. ನಡೆದ ವಿಷಯವನ್ನು ಇಂಚಿಂಚಾಗಿಯೇ ಅವನಿಗೆ ಹೇಳಿ ದುಃಖೋಪಶಮನ ಮಾಡಿಕೊಳ್ಳಬೇಕೆನ್ನುವ ತುಡಿತವಿದ್ದರೂ ಮಿಸುಕಾಡದೆ ನಿಂತಿದ್ದ ಅವನನ್ನು ಕಂಡು ಮುಖ ಕಂತಿಸಿ ಒಳನಡೆದಳು.

ಕನಸಿನಿಂದ ಎಚ್ಚೆತ್ತುಕೊಂಡಂತೆ ಅರುಣ ಅವಳ ಹಿಂದೆಯೇ ನಡೆದು ಅವಳ ತೋಳುಗಳನ್ನು ಹಿಡಿದು ತನ್ನತ್ತ ತಿರುಗಿಸಿ ಕಣ್ಣುಗಳಲ್ಲಿಯೇ ಪ್ರಶ್ನಿಸಿದ. ಅವನಿಂದ ಬಿಡಿಸಿಕೊಂಡ ಹೇಮಾ ಹೇಳಲೇಬೇಕೆಂದಿದ್ದ ವಿಷಯವನ್ನು ಉಗುಳಿನೊಂದಿಗೆ ನುಂಗಿಕೊಂಡು ತನಗೆ ತಾನೇ ಸಮಾಧಾನ ಹೊಂದಿ ಏನಿಲ್ಲ ಎನ್ನುವಂತೆ ಮೌನಿಯಾದಳು.

ಹೇಮಾಳ ಕಣ್ಣೀರಿಗೆ ಕರಗಿದವನು ಅವಳು ಇನ್ನೇನೋ ಅವಾಂತರ ಮಾಡಿಕೊಂಡಿರುವಳೇನೋ ಅಂದುಕೊಂಡು ಅವಳು ಸಮಾಧಾನ ಹೊಂದಿದ ಮೇಲೆ ವಿಚಾರಿಸುವುದೆಂದು ಹೊರಗೆ ಬಂದು ಟೀವಿಯ ಮುಂದೆ ಕುಳಿತ. ಎಂದೂ ಮುಗಿಯದ ಮೆಗಾ ಧಾರಾವಾಹಿಯಂತೆ ಹಿಂದೆ ನಡೆದ ಘಟನೆಗಳಲೆಲ್ಲಾ ಬಿಚ್ಚಿಕೊಳ್ಳುವಷ್ಟರಲ್ಲಿ ಪೊಲೀಸ್ ಸ್ಟೇಷನ್‌ನಿಂದ ಅಗತ್ಯವಾಗಿ ಬರುವಂತೆ ಸಬ್‌ಇನ್ಸ್‌ಪೆಕ್ಟರ್ ಅವರ ಕರೆ ಬಂತು.

ಸಬ್‌ಇನ್ಸ್‌ಪೆಕ್ಟರ್ ಸುಚರಿತ್ ಅಪರಿಚಿತನೇನಲ್ಲ. ಆದರೆ ಕರೆ ಬಂದ ಸಮಯ ಸ್ವಲ್ಪ ಅರುಣನನ್ನು ಕಲಕಿತು. ಏನೊಂದೂ ಕಾರಣ ಹೇಳದೆ ಹೇಮಾ ಅತ್ತು ಅವನ ಮನಸ್ಸಿನ ಮೇಲೆ ಒಂದು ನಿಗೂಢ ಛಾಯೆಯ ಮುದ್ರೆಯೊತ್ತಿ ಬಂಧಿಸಿದಳು. ಸುಚರಿತ್ ಸುಮ್ಮನೆ ಕರೆ ಮಾಡುವವನಲ್ಲ. ಬಲವಾದ ಕಾರಣವಿದ್ದಿರಲೇಬೇಕು. ಅವನ ಕರೆಗೂ ಹೇಮಾಳ ಅಳುವಿಗೂ ಸಂಬಂಧವಿರಬಹುದೇನೋ ಎಂದು ಯೋಚಿಸಿದವನಿಗೆ ಹೇಮಾಳನ್ನು ಕೇಳುವ ಧೈರ್ಯವೂ ಇಲ್ಲ. ಕೇಳಿದರೆ ಅವಳು ಹೇಳಿಯಾಳೆಂಬ ನಿಕ್ಕಿಯೂ ಇರಲಿಲ್ಲ.

ಹೇಮಾಳನ್ನು ಹುಡುಕಿಕೊಂಡು ಅರುಣ ಕೋಣೆಗೆ ಬರುವಷ್ಟರಲ್ಲಿ ಅವಳು ಯಾರೊಂದಿಗೋ ಫೋನ್‌ನಲ್ಲಿ ಮೆಲು ದನಿಯಲ್ಲಿ ಮಾತಾಡುವುದು ಕೇಳಿಸಿತು. ಮಳೆಯ ತೀವ್ರತೆಯಿನ್ನೂ ಕಡಿಮೆಯಾಗಿರಲಿಲ್ಲ. ಸುಚರಿತ್‌ನನ್ನು ಭೇಟಿಯಾಗದೆ ಬೇರೆ ದಾರಿಯಿಲ್ಲ. ಅವನ ಮಾತಿನಲ್ಲಿಯೇ ಅರ್ಜೆಂಟ್ ಎನ್ನುವ ಪದ ಹೇಮಾಳಿಗೆ ಸಂಬಂಧಪಟ್ಟದ್ದಾದರೆ ಹೇಮಾಳ ಅಳುವಿನ ಕಾರಣವೂ ಸುಲಭದಲ್ಲಿ ತಿಳಿದುಹೋಗಬಹುದೆನ್ನುವ ಆಕಾಂಕ್ಷೆಯಿಂದ ಮಳೆಯನ್ನೂ ಲೆಕ್ಕಿಸದೆ ಹೇಮಾಳಿಗೆ ಹೇಳದೆಯೇ ಸ್ಕೂಟರ್‌ನ ಮೇಲಿದ್ದ ರೈನ್ ಕೋಟ್ ಧರಿಸಿ ಗೇಟು ತೆರೆದು ಸ್ಟೇಷನ್ ಕಡೆಗೆ ಹೊರಟ.

ಅರುಣ ಹೊರಗೆ ಹೋದದ್ದು ಹೇಮಾಗೆ ತಿಳಿಯಲಿಲ್ಲ. ಹೊರಗೆ ನಿಂತರೆ ಎದುರು ಮನೆಯ ಯುವಕ ಅವಳನ್ನೇ ನೋಡುತ್ತಿರುವುದನ್ನು ಗಮನಿಸಿದವಳು ಒಳಗೆ ನಡೆದು ಬಾಗಿಲು ಮುಚ್ಚಿ ಚಿಲಕ ಹಾಕಿದಳು. ಇದು ನಿನ್ನೆ ಮೊನ್ನೆಯಿಂದ ನಡೆಯುತ್ತಿರುವುದಲ್ಲ. ಅವಳು ಹೊರಗೆ ಬಂದಾಗಲೆಲ್ಲಾ ಆತ ಅವಳನ್ನೇ ಗಮನಿಸುತ್ತಿರುವಂತೆ ತದೇಕಚಿತ್ತದಿಂದ ಅವಳನ್ನು ನೋಡುತ್ತಿರುವುದು ಅವಳ ಗಮನಕ್ಕೆ ಬಂದು ಮುಜುಗರವಾಗಿ ಅವನಿಂದ ತಪ್ಪಿಸಿಕೊಳ್ಳಲೆಂಬಂತೆ ಒಳಗೆ ನಡೆಯುತ್ತಿದ್ದಳು.

ನೆರೆಮನೆಯ ಯುವಕನನ್ನು ನೋಡಿ ಪರಿಚಯವಿದೆ. ಅರುಣ ಯಾವತ್ತೋ ಅವನ ಹೆಸರನ್ನು ಕೂಡ ಹೇಳಿದ್ದು ನೆನಪಿದೆ. ಆದರೆ ಆತ ಸಭ್ಯ, ತಾನಾಯಿತು ತನ್ನ ಪಾಡಾಯಿತೆನ್ನುವಂತೆ ಇರುವವನು. ಹಾಗಂತ ಸಮಾಧಾನ ಹೊಂದಿದ ಮೇಲೆ ಹೇಮಾ ಧೈರ್ಯದಿಂದ ಹೊರಗೆ ಬಂದು ನಿಂತರೆ ಅವನನ್ನು ನೋಡುತ್ತಲೇ ಅವ್ಯಕ್ತ ಭಾವನೆಯೊಂದು ಮೂಡಿ ಮರೆಯಾಗುವುದು ಮಾಮೂಲಾಯಿತು.

ಆತನನ್ನು ನೋಡುತ್ತಿದ್ದರೆ ಯಾವುದೋ ಸಿನಿಮಾದ ಹೀರೋನಂತೆಯೂ ಮತ್ತೊಂದು ಕೋನದಿಂದ ದೃಷ್ಟಿಮಾಂದ್ಯನಂತೆಯೂ ಕಾಣಿಸುತ್ತಿದ್ದ. ತೀರಾ ಇತ್ತೀಚೆಗೆ ಅರುಣನ ಜೊತೆಗೆ ಅವನು ಒಂದೆರಡು ಬಾರಿ ಸ್ಕೂಟರ್‌ನಲ್ಲಿ